# ನಿಮ್ಮೊಡನೆ

## ಸಾಧಕರಿಗೆ ಬೆಂಬಲ ನೀಡಿದರೆ ಸಾಲದು, ಗೆಲುವಿನ ವೇದಿಕೆಗಳನ್ನು ಸೃಷ್ಟಿಸಬೇಕು!

**ಕ್ರೀಡಾಪಟುಗಳಿಗೆ ನೀಡುವ ಸರ್ಕಾರದ ಉತ್ತೇಜನ ಬಾಯಿಮಾತಿನದು ಆಗಬಾರದು. ಪ್ರತಿಭೆಗಳನ್ನು ಗುರ್ತಿಸಿ, ತಿದ್ದುವ–ಬೆಳೆಸುವ ಕೆಲಸವನ್ನು ಸರ್ಕಾರ ಮಾಡಬೇಕು. ಗೆದ್ದ ನಂತರ ಗೌರವಿಸುವುದಕ್ಕಿಂತಲೂ ಗೆಲುವಿನ ಅವಕಾಶಗಳನ್ನು ಸೃಷ್ಟಿಸುವ ಕೆಲಸ ಬಹುಮುಖ್ಯವಾದುದು.**

**2022**ರ ಕಾಮನ್‌ವೆಲ್ತ್ ಕ್ರೀಡಾಕೂಟ ಹಾಗೂ ಚೆಸ್ ಒಲಿಂಪಿಯಾಡ್‌ನಲ್ಲಿನ ದೇಶದ ಸಾಧನೆ, ಸಂಭ್ರಮದ ಜೊತೆಗೆ ಭಾರತದಲ್ಲಿನ ಕೀಡಾಕ್ಷೇತ್ರದ ಸ್ಥಿತಿಗತಿಯ ಆತ್ಮಾವಲೋಕನಕ್ಕೂ ಕಾರಣವಾಗಬೇಕು. 22 ಚಿನ್ನ, 16 ಬೆಳ್ಳಿ ಹಾಗೂ 23 ಕಂಚು ಸೇರಿದಂತೆ ಒಟ್ಟು 61 ಪದಕಗಳನ್ನು ಗಳಿಸುವ ಮೂಲಕ, ಕ್ರೀಡಾಕೂಟದಲ್ಲಿ ಭಾರತ 4ನೇ ಸ್ಥಾನ ಪಡೆದಿದೆ. ಚೆಸ್ ಒಲಿಂಪಿಯಾಡ್‌ನಲ್ಲಿ ಎರಡು ಕಂಚಿನ ಪದಕ ದೊರೆತಿವೆ. ಮುಕ್ತ ವಿಭಾಗದಲ್ಲಿ ‘ಭಾರತ ಬಿ’ ತಂಡ ಹಾಗೂ ಮಹಿಳೆಯರ ವಿಭಾಗದಲ್ಲಿ ‘ಭಾರತ ಎ’ ತಂಡ ಪದಕ ಗಳಿಸಿವೆ. ಕಾಮನ್‌ವೆಲ್ತ್ ಕ್ರೀಡಾಕೂಟ ಹಾಗೂ ಚೆಸ್ ಒಲಿಂಪಿಯಾಡ್‌ನಲ್ಲಿನ ಪದಕಗಳ ಗಳಿಕೆ ಖಂಡಿತವಾಗಿಯೂ ದೇಶ ಹೆಮ್ಮೆಪಡುವ ಸಾಧನೆಗಳು.

2014ರಲ್ಲಿ 64 ಹಾಗೂ 2018ರಲ್ಲಿ 66 ಪದಕಗಳನ್ನು ಗಳಿಸಿದ್ದ ಭಾರತ ಈ ಬಾರಿಯೂ ಪದಕ ಗಳಿಕೆಯಲ್ಲಿ ಉತ್ತಮ ಸಾಧನೆಯನ್ನೇ ಮಾಡಿದೆ. ಆದರೆ, ಕಾಮನ್‌ವೆಲ್ತ್ ಕೂಟದಲ್ಲಿ ಇದು ಭಾರತದ ಅತ್ಯುತ್ತಮ ಸಾಧನೆಯೇನಲ್ಲ ಎನ್ನುವುದನ್ನು ಮರೆಯಬಾರದು. 2010ರಲ್ಲಿ 101 ಪದಕಗಳನ್ನು ಗಳಿಸಿರುವುದು ಈವರೆಗಿನ ಉತ್ಕೃಷ್ಟ ಸಾಧನೆ. ಹನ್ನೆರಡು ವರ್ಷಗಳ ಹಿಂದಿನ ಸಾಧನೆಗೆ ಹೋಲಿಸಿದರೆ ಈಗಿನ ಗಳಿಕೆ ಕೊಂಚ ನಿರಾಶೆ ಮೂಡಿಸುವಂತಹದ್ದು. ಪ್ರಸಕ್ತ ಕೂಟದಲ್ಲಿ ಮೊದಲೆರಡು ಸ್ಥಾನಗಳಲ್ಲಿರುವ ಆಸ್ಟ್ರೇಲಿಯಾ ಹಾಗೂ ಇಂಗ್ಲೆಂಡ್‌ಗಳು ಕ್ರಮವಾಗಿ 178 ಹಾಗೂ 176 ಪದಕಗಳನ್ನು ಗಳಿಸಿರುವುದು, ಸ್ಪರ್ಧೆಯಲ್ಲಿ ಭಾರತ ಯಾವ ಹಂತದಲ್ಲಿದೆ ಎನ್ನುವುದು ಸ್ಪಷ್ಟವಾಗುತ್ತದೆ. ಆಸ್ಟ್ರೇಲಿಯಾ ಗಳಿಸಿರುವ 67 ಚಿನ್ನದ ಪದಕಗಳು, ಭಾರತದ ಒಟ್ಟಾರೆ ಪದಕಗಳ ಸಂಖ್ಯೆಗಿಂತಲೂ ಹೆಚ್ಚಾಗಿರುವುದನ್ನು ಗಮನಿಸಬೇಕು.

ಕಾಮನ್‌ವೆಲ್ತ್ ಕ್ರೀಡಾಕೂಟಕ್ಕೆ ಹೋಲಿಸಿದರೆ ಚೆಸ್ ಒಲಿಂಪಿಯಾಡ್‌ನಲ್ಲಿನ ಭಾರತದ ಸಾಧನೆಗೆ ವಿಶೇಷ ಮಹತ್ವವಿದೆ. ಕಂಚು ಗೆದ್ದ ‘ಭಾರತ ಬಿ’ ತಂಡದ ಯುವ ಪ್ರತಿಭೆಗಳು ವಿಶ್ವದ ಗಮನಸೆಳೆದಿದ್ದಾರೆ. ವಿಶ್ವನಾಥನ್ ಆನಂದ್ ನಂತರ ಚೆಸ್ ನಕಾಶೆಯಲ್ಲಿ ಭಾರತದ ಭವಿಷ್ಯವೇನು ಎನ್ನುವ ಪ್ರಶ್ನೆಗೆ ಒಲಿಂಪಿಯಾಡ್‌ನಲ್ಲಿನ ಯಶಸ್ಸು ಉದಾಹರಣೆಯಂತಿದೆ. ಯುವ ಪ್ರತಿಭೆಗಳಾದ ಡಿ. ಗುಕೇಶ್, ಆರ್. ಪ್ರಜ್ಞಾನಂದ, ನಿಹಾಲ್ ಸರೀನ್, ರೌನಕ್ ಸಾಧ್ವಾನಿ, ಬಿ. ಅಧಿಬನ್ ಅವರು ವಿಶ್ವದ ಯಾವುದೇ ಆಟಗಾರನಿಗೆ ಸವಾಲು ಒಡ್ಡಬಲ್ಲ ಸಾಮರ್ಥ್ಯ ಹೊಂದಿದ್ದಾರೆ.

ಕಾಮನ್‌ವೆಲ್ತ್ ಕ್ರೀಡಾಕೂಟ ಹಾಗೂ ಚೆಸ್ ಒಲಿಂಪಿಯಾಡ್‌ನಲ್ಲಿನ ಭಾರತೀಯರ ಸಾಧನೆಗೆ ಸಂಭ್ರಮಿಸುತ್ತಲೇ ಕ್ರೀಡಾಕ್ಷೇತ್ರಕ್ಕೆ ದೇಶದಲ್ಲಿ ದೊರೆಯುತ್ತಿರುವ ಸೌಲಭ್ಯಗಳ ಕುರಿತೂ ಪರಾಮರ್ಶೆ ನಡೆಸಬೇಕಾಗಿದೆ. ಸ್ವಯಂಪ್ರತಿಭೆಯಿಂದ ಮೇಲೆ ಬರುವ ಕ್ರೀಡಾಪಟುಗಳಿಗೆ ನಮ್ಮಲ್ಲಿ ಉತ್ತೇಜನ ದೊರೆಯುತ್ತದೆ. ಆದರೆ, ಪ್ರತಿಭೆಯನ್ನು ಎಳೆಯ ವಯಸ್ಸಿನಲ್ಲಿಯೇ ಗುರ್ತಿಸಿ ರೂಪಿಸುವ ಅವಕಾಶಗಳು ಕಡಿಮೆ. ಕೆಲವೊಮ್ಮೆ ಅಂತರರಾಷ್ಟ್ರೀಯ ಕಣದಲ್ಲಿ ಸಾಧನೆ ಮಾಡಿಯೂ ಹಿಂದುಳಿಯುವ ಸ್ಥಿತಿ ಕೆಲವರದಾಗಿರುತ್ತದೆ. ಇದಕ್ಕೆ ಉದಾಹರಣೆ, ಇತ್ತೀಚಿನ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಕಂಚಿನ ಪದಕ ಗಳಿಸಿರುವ ಕರ್ನಾಟಕದ ವೇಟ್ ಲಿಫ್ಟರ್ ಗುರುರಾಜ್ ಪೂಜಾರಿ. ನಾಲ್ಕು ವರ್ಷಗಳ ಹಿಂದೆ ಅವರು ಪದಕ ಗೆದ್ದಾಗ, ಅಂದಿನ ರಾಜ್ಯಸರ್ಕಾರ ಪ್ರಕಟಿಸಿದ್ದ 20 ಲಕ್ಷ ರೂಪಾಯಿ ಬಹುಮಾನ ಹಾಗೂ ಸರ್ಕಾರಿ ಉದ್ಯೋಗದ ಭರವಸೆ ಮರೀಚಿಕೆಯಾಗಿಯೇ ಉಳಿದಿದೆ. ಈಗ ಮತ್ತೊಮ್ಮೆ ಪದಕ ಗೆದ್ದಿರುವ ಸಂದರ್ಭದಲ್ಲಾದರೂ ಬಹುಮಾನ ದೊರೆಯುವುದೆ, ಉದ್ಯೋಗದ ಭರವಸೆ ನನಸಾಗುವುದೇ ಎನ್ನುವ ಅವರ ಪ್ರಶ್ನೆಗಳಿಗೆ ಉತ್ತರಿಸುವವರು ಯಾರು?

ಕ್ರೀಡಾಪಟುಗಳಿಗೆ ನೀಡುವ ಸರ್ಕಾರದ ಉತ್ತೇಜನ ಬಾಯಿಮಾತಿನದು ಆಗಬಾರದು. ಸಕಾಲಕ್ಕೆ ದೊರೆಯುವ ಉತ್ತೇಜನ ಅವರು ಇನ್ನಷ್ಟು ಸಾಧನೆ ಮಾಡಲು ಪ್ರೇರಣೆಯಾಗುತ್ತದೆ. ಹಾಗೆಯೇ, ಸಾಧನೆಯ ನಂತರ ಬಹುಮಾನ, ಸವಲತ್ತುಗಳನ್ನು ಒದಗಿಸುವುದಕ್ಕೆ ಸರ್ಕಾರದ ಪಾತ್ರ ಸೀಮಿತವಾಗಬಾರದು. ಪ್ರತಿಭೆಗಳನ್ನು ಗುರ್ತಿಸಿ, ತಿದ್ದುವ–ಬೆಳೆಸುವ ಕೆಲಸವನ್ನು ಸರ್ಕಾರ ಮಾಡಬೇಕು. ಗೆದ್ದ ನಂತರ ಗೌರವಿಸುವುದಕ್ಕಿಂತಲೂ ಗೆಲುವಿನ ಅವಕಾಶಗಳನ್ನು ಸೃಷ್ಟಿಸುವ ಕೆಲಸ ಬಹುಮುಖ್ಯವಾದುದು. ದುರದೃಷ್ಟದ ಸಂಗತಿಯೆಂದರೆ, ಶಾಲಾಕಾಲೇಜು ಹಂತದಲ್ಲಿ ಕ್ರೀಡೆಗಳು ಔಪಚಾರಿಕವಾಗಿಯಷ್ಟೇ ಇರುತ್ತವೆ. ಆಟದ ಅಂಗಳಗಳು ಇರುವ ಶಾಲಾಕಾಲೇಜುಗಳ ಸಂಖ್ಯೆ ಕಡಿಮೆ. ಸರ್ಕಾರಿ ಶಾಲೆಗಳ ಸ್ಥಿತಿ ಮತ್ತಷ್ಟು ಘೋರ. ಮಕ್ಕಳಿಗೆ ಪಠ್ಯಪುಸ್ತಕ, ಸಮವಸ್ತ್ರವನ್ನು ಸಕಾಲಕ್ಕೆ ತಲುಪಿಸಲು ಪ್ರಯಾಸಪಡುವ ಸರ್ಕಾರಗಳು, ಮಕ್ಕಳಿಗೆ ಆಟದ ಸಾಮಗ್ರಿಗಳನ್ನು ಒದಗಿಸುತ್ತವೆಯೆ? ಪರಿಸ್ಥಿತಿ ಹೀಗಿರುವಾಗ ಉತ್ತಮ ಕ್ರೀಡಾಪಟುಗಳು ರೂಪುಗೊಳ್ಳುವುದು ಹೇಗೆ? ಈ ಪ್ರಶ್ನೆಗೆ ಉತ್ತರ ಕಂಡುಕೊಳ್ಳಲು ‘ಅಮೃತ ಮಹೋತ್ಸವ’ ಸಂದರ್ಭ ಪ್ರೇರಣೆಯಾಗಬೇಕು.

■ ರಘುನಾಥ ಚ.ಹ.



ಈಶ್ವರ್